<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.474/2108. P.W.-2.**

ದಿನಾಂಕ:**09.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಯು ಎಸ್ ವಕೀಲರಿಂದ:-

ನನ್ನ ತಂದೆ ಮತ್ತು ನನ್ನ ತದೆಯ ಸಹೋದರರ ನಡುವೆ ಸುಮಾರು 40 ವರ್ಷದ ಹಿಂದೆ ಆಸ್ತಿ ವಿಭಾಗವಾಗಿರುತ್ತದೆ. ಸದರಿ ವಿಭಾಗದಲ್ಲಿ ಬೆಲಗೂರಿನಲ್ಲಿರುವ ಜಮೀನು ಮತ್ತು ಚಿನಕನಹಳ್ಳಿ ಗ್ರಾಮದಲ್ಲಿರುವ ಜಮೀನುಗಳು ಅಂದರೆ ದಾವಾ ಸ್ವತ್ತನ್ನು ಒಳಗೊಂಡಂತೆ ವಿಭಾಗವಾಗಿರುತ್ತದೆ. ಸದರಿ ವಿಭಾಗವು ಲಿಖಿತವಾಗಿ ಆಗಿರುವುದಿಲ್ಲ. ಸದರಿ ವಿಭಾಗದಂತೆ ಖಾತೆ ನಾವು ಮಾಡಿಕೊಂಡಿಲ್ಲ. ಖಾತೆ ಮಾಡಿಕೊಳ್ಳಲು ಅರ್ಜಿಯನ್ನು ನೀಡಿದ್ದೆ ಆದರೆ ಖಾತೆ ಆಗಿರುವುದಿಲ್ಲ. ಸದರಿ ಅರ್ಜಿಯನ್ನು ನನ್ನ ತಂದೆ ನೀಡಿದ್ದು ನನಗೆ ದಿನಾಂಕ ನೆನಪಿಲ್ಲ. ಬೆಲಗೂರಿನ ಜಮೀನುಗಳ ಖಾತೆ ನನ್ನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ಯಾವ ಕಾರಣಕ್ಕೆ ನಮಗೆ ಆಗಿಲ್ಲ ಎಂದು ನಾನು ಪರಿಶೀಲನೆ ಮಾಡಿಲ್ಲ.

ಪ್ರತಿವಾದಿ 1 ಮತ್ತು 2 ರವರ ತಂದೆಯಾದ ಹಾಲಯ್ಯ ಸುಮಾರು 12-13 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಹಾಲಯ್ಯ ರವರಿಗೆ ಒಟ್ಟು 4 ಜನ ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರುಗಳೆಂದರೆ ಆಶೋಕ, ರುದ್ರಯ್ಯ, ಓಂಕಾರಮೂರ್ತಿ ಮತ್ತು ರೇಣುಕಾರಾದ್ಯ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಬ್ಬರು ಮಾತ್ರ ಇದ್ದಾರೆ ಎನ್ನುತ್ತಾರೆ.

ಹಾಲಯ್ಯ ರವರ ತಂದೆಯಾದ ಒಪುನಯ್ಯ ರವರಿಗೆ ಎಷ್ಟು ಪಿತ್ರಾರ್ಜಿತ ಸ್ವತ್ತು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಕೂಡ ಒಪುನಯ್ಯ ರವರಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತಾಗಿರುತ್ತದೆ ಎಂದರೆ ಸರಿ. ದಾವಾ ಸರ್ವೆ ನಂಬರ್ 25 ರಲ್ಲಿ ಒಟ್ಟು 24 ಎಕರೆ 30 ಗುಂಟೆ ಜಮೀನು ಇತ್ತು. ಸದರಿ ಸರ್ವೆ ನಂಬರಿನಲ್ಲಿ ಒಟ್ಟು ಎಷ್ಟು ಜನಕ್ಕೆ ಖಾತೆ ಆಗಿದೆ ಎಂದು ಮತ್ತು ಅವರುಗಳಿಗೆ ಹೇಗೆ ಖಾತೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಒಪುನಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.

ಈ ದಾವೆಯನ್ನು ಖಾತೆ ಮಾಡಿಸಲು ಹಾಕಿರುತ್ತೇನೆ. ದಾವೆಯಲ್ಲಿ ಬರೆಸಿರುವ ವಿಚಾರಗಳು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ನಿರಂತರ ಸ್ವಾಧೀನಾನುಭವದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಸ್ವಾಧೀನಾನುಭವದಲ್ಲಿ ಇದೆ ಎನ್ನುತ್ತಾರೆ.

ನಿಪಿ 1 ರಿಂದ 4 ರ ಕ್ರಯಪತ್ರಗಳಲ್ಲಿ ಯಾರು ಯಾರು ಬರವಣಿಗೆ ಸಹಿ ಮಾಡಿದ್ದಾರೆ ಹಾಗೂ ಯಾರು ಯಾರು ಹೆಬ್ಬೆಟ್ಟಿನ ರುಜು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ದಾಖಲೆಗಳಲ್ಲಿ ನಮೂದು ಆಗಿದೆ ಎನ್ನುತ್ತಾರೆ. ಹಾಲಯ್ಯ ರವರು

ಯಾವುದೇ ದಾಖಲೆಗಳಿಗೆ ತಮ್ಮ ಸಹಿ / ಹೆಬ್ಬೆಟ್ಟಿನ ರುಜು ಮಾಡಿಲ್ಲ ಎಂದರೆ ಸರಿಯಲ್ಲ. ಹಾಲಯ್ಯನ ಮಕ್ಕಳಿಗೆ ದಾವಾ ಸ್ವತ್ತಿನ ಮೇಲೆ ಪಿತ್ರಾರ್ಜಿತವಾದ ಹಕ್ಕು ಇದೆ ಎಂದರೆ ಸರಿಯಲ್ಲ.

ಸರ್ವೆ ನಂ.25 ರಲ್ಲಿ ಒಪುನಯ್ಯ ಮತ್ತು ಹಾಲಯ್ಯ ರವರಿಗೆ 8 ಎಕರೆ 10 ಗುಂಟೆ ಜಮೀನು ಇದೆ. ಸದರಿ 8 ಎಕರೆ 10 ಗುಂಟೆ ಜಮೀನಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿದೆ ಎನ್ನುತ್ತಾರೆ. ದಾವಾ ಸ್ವತ್ತಿನ ಕಂದಾಯವನ್ನು ನಾನು ಪಾವತಿ ಮಾಡಿದ್ದೇನೆ. ಆ ಬಗ್ಗೆ ದಾಖಲೆ ಇದೆ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸಹಃ ಸ್ವಾಧೀನಾನುಭವ ಹೊಂದಿಲ್ಲವೆಂದರೆ ಸರಿಯಲ್ಲ. ನಿಪಿ 1 ರಿಂದ 4 ರ ದಾಖಲೆಗಳನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಸೃಷ್ಟಿಸಿಕೊಂಡಿರುವ ದಾಖಲೆಗಳ ಆಧಾರದ ಮೇಲೆ ಅಕ್ರಮ ಸ್ವಾಧೀನ ಪಡೆಯಲು ನಾನು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ. ನಾನು ಮತ್ತು ಒಪುನಯ್ಯ ರವರು ಸಂಬಂಧಿಕರು ಎಂದರೆ ಸರಿ. ದುರುದ್ದೇಶದಿಂದ ಪ್ರತಿವಾದಿಗಳ ವಿರುದ್ಧ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಕ್ರಯಪತ್ರ ಆಗಿದ್ದು ಸತ್ಯವೇ ಆಗಿದ್ದಲ್ಲಿ ಹಿಂದೆಯೇ ಖಾತೆ ಮಾಡಿಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ತಿಳುವಳಿಕೆ ಇರಲಿಲ್ಲ ಎನ್ನುತ್ತಾರೆ.

ನನ್ನ ತಂದೆಯು ನಾನು ಪ್ರಾಪ್ತನಾದ ಬೆಲಗೂರು ಗ್ರಾಮದಲ್ಲಿ ಜಮೀನು ಖರೀದಿಸಿರುತ್ತಾರೆ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.